# ಸಂಪೂರ್ಣ ಸೋಲಾರ್ ಗ್ರಾಮ!

**ಕುಂದಾಪುರದ ಬಳಿಯ ಅಮಾಸೆಬೈಲು ದೇಶದ ಮೊತ್ತಮೊದಲ ಸೋಲಾರ್ ಗ್ರಾಮ!**



ಅಮಾಸೆಬೈಲು

ಇದು ಅಕ್ಷರಶಃ ಸೂರ್ಯ ಮುಳುಗದ ನಾಡು. ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಈ ಊರಲ್ಲಿ ಹಗಲು ಸೂರ್ಯನ ಬೆಳಕಿದ್ದರೆ ರಾತ್ರಿಯೂ ಸೂರ್ಯನ ಬೆಳಕೇ ಇರುತ್ತದೆ. ಹೇಗೆಂದರೆ ಇದು ಸಂಪೂರ್ಣ ಸೋಲಾರ್ ಗ್ರಾಮ.

ದೇಶದ ಪ್ರಥಮ ಸೋಲಾರ್ ಗ್ರಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಊರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಅಂಚಿನಲ್ಲಿದೆ. ಅಮಾಸೆಬೈಲು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಅಮಾಸೆಬೈಲು ಎಂಬ ಹೆಸರಿನ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಚ್ಚಟ್ಟು ಮತ್ತು ರಟ್ಟಾಡಿ ಎಂಬ ಮತ್ತೆರಡು ಗ್ರಾಮಗಳೂ ಇವೆ. ಒಂದು ಕಾಲದಲ್ಲಿ ಕುಗ್ರಾಮಗಳಾಗಿದ್ದ ಈ ಗ್ರಾಮಗಳತ್ತ ಇಂದು ಇಡೀ ದೇಶವೇ ತಿರುಗಿ ನೋಡುತ್ತಿದೆ ಎಂದರೆ ಅದಕ್ಕೆ ಕಾರಣ ಸೂರ್ಯನ ಬೆಳಕು.

ಅಂದರೆ ದೇಶದ ಪ್ರಥಮ ಸೋಲಾರ್ ಗ್ರಾಮವಾದ ಅಮಾಸೆಬೈಲು, ಇಂಧನ ಸ್ವಾವಲಂಬನೆಯ ಮುನ್ನುಡಿಗೆ ಹೊಸ ಭಾಷ್ಯ ಬರೆದಿರುವ ಗ್ರಾಮ. ಒಂದು ಸಲ ಈ ಗ್ರಾಮಕ್ಕೆ ಕಾಲಿಟ್ಟರೆ ಸಾಕು, ಎಲ್ಲೆಡೆ ಸೋಲಾರ್ ಫಲಕಗಳು ಕಾಣಿಸುತ್ತವೆ. ಇಲ್ಲಿ ಯಾರ ಮನೆಯಲ್ಲಿ ನೋಡಿದರೂ ಬೆಳಕು. ಕರೆಂಟು ಹೋಗುವುದೇ ಇಲ್ಲ. ಕತ್ತಲೆಗೆ ಆಸ್ಪದವೇ ಇಲ್ಲ.

ಇವೆಲ್ಲ ಹೇಗೆ ಸಾಧ್ಯವಾಯಿತು.. ಎನ್ನುವುದು ಕುತೂಹಲಕರ ಸಂಗತಿ.

ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸುಮಾರು ಒಂದೂವರೆ ಸಾವಿರಕ್ಕೂ ಅಧಿಕ ಮನೆಗಳಿಗೆ ವಿಕೇಂದ್ರೀಕೃತ ಡಿ.ಸಿ.ಸೋಲಾರ್ ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಹಾಗೆಯೇ ಅಮಾಸೆಬೈಲು ಪೇಟೆಯ ಕೇಂದ್ರದಲ್ಲಿ ಹೈಮಾಸ್ಟ್ ಬೀದಿ ದೀಪವನ್ನೂ ಹಾಗೂ ರಸ್ತೆಗಳ ಪಕ್ಕದಲ್ಲಿ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ವಿಕೇಂದ್ರೀಕೃತ ಡಿ.ಸಿ.ಬೆಳಕಿನ ವ್ಯವಸ್ಥೆಯು ಹೆಚ್ಚು ದಕ್ಷತೆಯುಳ್ಳ ವ್ಯವಸ್ಥೆಯಾಗಿದ್ದು, ದೀರ್ಘಕಾಲ ಬಾಳಿಕೆಯಿದ್ದು, ನಿರ್ವಹಣೆಯೂ ಸುಲಭ. ಸರಳ ತಂತ್ರಜ್ಞಾನದೊಂದಿಗೆ ಅಳವಡಿಸಿಕೊಂಡ ಗ್ರಾಹಕರೇ ಸುಲಭವಾಗಿ ಇದರ ನಿರ್ವಹಣೆಯನ್ನು ಮಾಡಬಹುದು. ಇದರ ಜೊತೆಗೆ ಕಡಿಮೆ ವೆಚ್ಚದ ವ್ಯವಸ್ಥೆಯೂ ಆಗಿದ್ದು ಬಡ ಮತ್ತು ಮಧ್ಯಮ ವರ್ಗದ ಮನೆಗಳಿಗೆ ಸೂಕ್ತವಾಗಿದೆ. ಗ್ರಾಹಕರ ಅವಶ್ಯಕತೆಗಳಿಗೆ ಅನುಗುಣವಾಗಿ ಎಷ್ಟು ದೀಪಗಳನ್ನು ಬೇಕಾದರೂ ಅಳವಡಿಸಬಹುದು. ಈ ಕಾರಣಕ್ಕಾಗಿ ಈ ಯೋಜನೆಯಡಿ ಎಲ್ಲಾ ಮನೆಗಳಿಗೂ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಬೆಳಕಿನ ಕ್ರಾಂತಿಗೆ ಕಾರಣರಾದವರು–

ಈ ಸೋಲಾರ್ ಗ್ರಾಮವೆಂಬ ಮಹಾಯಾಗಕ್ಕೆ ಮುನ್ನುಡಿ ಬರೆದವರು, ಮಾಜಿ ಶಾಸಕರೂ, ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರೂ ಆಗಿದ್ದ ಎ.ಜಿ.ಕೊಡ್ಗಿಯವರು. 2008ರಲ್ಲಿ ಅಮಾಸೆಬೈಲು ಗ್ರಾಮ ಪಂಚಾಯತ್‌ನ ಸಮಗ್ರ ಅಭಿವೃದ್ಧಿಯೊಂದಿಗೆ ಮಾದರಿ ಗ್ರಾಮವನ್ನಾಗಿಸುವ ನಿಟ್ಟಿನಲ್ಲಿ ಅಮಾಸೆಬೈಲು ಚಾರಿಟೇಬಲ್ ಟ್ರಸ್ಟ್ ಪ್ರಾರಂಭಿಸಿದರು. 5 ವರ್ಷಗಳಲ್ಲಿ ವಿವಿಧ ಸಂಘ ಸಂಸ್ಥೆಗಳು ಹಾಗೂ ಸರ್ಕಾರದ ಸಹಕಾರದೊಂದಿಗೆ 50 ಕೋಟಿ ರೂಪಾಯಿ ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿಯೊಂದಿಗೆ ಮಾದರಿ ಗ್ರಾಮವನ್ನಾಗಿಸುವ ಕನಸು ಕಂಡರು. ಇಂದು ಅದು ಸಾಕಾರಗೊಂಡಿದೆ.

ಈ ಸೋಲಾರ್ ಗ್ರಾಮ ಮಾಡಬೇಕೆಂಬ ಚಿಂತನೆಗೆ ಚಾಲನೆ ದೊರೆತಿದ್ದು 2012ನೇ ಇಸವಿಯಲ್ಲಿ. 1995 ರಿಂದ ಸೋಲಾರ್ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಸೆಲ್ಕೋ ಸೋಲಾರ್ ಸಂಸ್ಥೆಯು ಈ ಹಿಂದೆಯೇ ಸುಮಾರು 50– –70 ಮನೆಗಳಿಗೆ ಸೋಲಾರ್ ಬೆಳಕಿನ ವ್ಯವಸ್ಥೆಯನ್ನು ಅಳವಡಿಸಿತ್ತು. ಈ